ವಿಷಯ : ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿಜನ ಗಿರಿಜನ ತಾಂಡಗಳಿಗೆ ಹೆಂಡ ಸಾರಾಯಿ ಮಾರಾಟ ಮಾಡಲು ಪರವಾನಗಿ ಕೊಡುವುದು.

ಪ್ರ. ಸಂಖ್ಯೆ 523 (1820) ಶ್ರೀ ಬಿ. ಎಚ್. ಯಂಕಾನಾಯಕ್ (ಹರಪನಹಳ್ಳಿ) ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ. ಹರಪನಹಳ್ಳಿ ತಾಲ್ಲೂಕು ಲಂಬಾಣಿ ಮತ್ತು ಹರಿಜನ ಗಿರಿಜನ ಊರುಗಳಲ್ಲಿ ಹೆಂಡ ಸಾರಾಯಿ ಮಾರಾಟ ಮಾಡಲು ಪರವಾನಗಿ ಕೊಟ್ಟಿದೆಯೆ :

ಆ. ಹಾಗಿದ್ದಲ್ಲಿ ಪರವಾನಗಿ ಇಲ್ಲದೆಯೆ ತಾಂಡಾಗಳಲ್ಲಿ ಮತ್ತು ಹರಿಜನ ಗಿರಿಜನ ಕೇರಿಗಳಲ್ಲಿ ಹೆಂಡ ಸಾರಾಯಿ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ. ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ ;

ಶ್ರೀ ಜೆ. ಹೆಚ್. ಪಟೇಲ್ (ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).—

ಅ. ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿಜನ ಕೇರಿಗಳಲ್ಲಿ ಪರವಾನಗಿ ಕೊಟ್ಟಿರುವುದಿಲ್ಲ ಆದರೆ ಲಮಾಣಿ ತಾಂಡಾದ ಹೊರವಲಯದಲ್ಲಿ 2 ಸಾರಾಯಿ ಮತ್ತು 5 ಶೇಂದಿ ಅಂಗಡಿಗಳಿಗೆ ಪರವಾನಗಿ ನಿಡಲಾಗಿದೆ.

ಆ. ಇಲ್ಲ.

ಇ. 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

Sub : Town Municipal Council Dandeli

Qn. No. 525 (1702) Sri R. V. Deshpande (Haliyal) will the Minister for Urban Development be pleased to state :—

(a) Whether there is a proposal before the Government to upgrade the Town Municipal Council, Dandeli as City Municipality ;

(b) If so, the action taken by the Government in this regard ?

Sri M. Chandrasekhar (Minister for Urban Development and B.D.A) :—

(a) The Dandeli Town Municipal Council has passed a Resoluution to this effect on 23-9-1983.

(b) The matter is under consideration.

Sub : Irrigation pumpsets in Bidar Taluk.

Qn. No. 527 (1073) Sri Narayana Rao Manhalli (Bidar) will the Ministre for power and Excise pleased to state :-

(a) The number of Irrigation pumpsets in Bidar Taluk ;

(b) Number of applications for Irrigation pumpsets pending for connection.

(c) When these applications will be disposed off.

Sri J. H. Patel (Minister for Excise and Power.)

(a) 4600 Irrigation pumpsets.

(b) 223 Applications.

(c) It is targeted to clear the applications before August 1984.

Sub :-Regarding Power Supply to Irrigation pumpsets

Qn. No. 528 (1074) Sri Narayana Rao Manhalli (Bidar).— will the Minister for Excise & Power be pleased to state :

(a) The percentage of power diverted to Irrigation Pumpset in Agricultural sector ;

(b) When the power position for I.P. Sets will be set right :

(c) Whether there is any alternate arrangement made for supply of power to agriculturists :

Sri J. H. Patel :- (Minister for Excise and Power)

(a) Percentage of power diverted to I. P. Sets of Agricultural Sector is 6.4%.

(b) The power supply position to I. P. sets is alright except for five hours load shedding during day times.

(c) Does not arise in view of reply to clause (b) above.

Papers Laid on The Table

Sri A. Lakshmisagar (Minister for Law, Parliamentary Affiars and Housing).—Sir, on behalf of the Chief Minister I beg to lay :

Order No. HD. 235 CNA 83 dated 21st March 1984 Renewal of exemption to screen 35 mm films at B.E.L. Recreation Hall ;

As required under Section 22 of the Karnataka Cinemas (Regulation) Act, 1984.

Mr. Deputy Speaker.—Papers laid.

Sri A. Lakshmi Sagar (Minister for Law, Parliamentary Affairs and Housing).--Sir, I beg to lay :

(i) Notification No. LAW 10 LGR 82 dated 10th May, 1982. The Karnataka Legislature (Presiding and Deputy Presiding Officers, Leaders of the Opposition and the Government Chief Whips) Medical Attendance (Special) Rules, 1982 ; and

(ii) Notification No. LAW 10 LGR 82 dated 30th Nov. 1982.

The Karnataka Legislature (Presiding and Deputy Presiding Officers, Leaders of the Opposition and the Government Chief Whips) Medical Attendance (Amendment) Rules, 1982 ;

as required under sub-section (1-A) and (2) of Section 15 of the Karnataka Legislature Salaries, Pensions and Allowances Act, 1957.

Mr. Deputy Speaker.—Papers laid.

ವರದಿಗಳನ್ನು ಮಂಡಿಸುವುದು

ಶ್ರೀ ಜ್ಞಾನದೇವ್ ಎಸ್. ದೊಡ್ಡಮೇಟಿ.-- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾಗಿ ಸಮಿತಿಯ ಪರವಾಗಿ ಮೊದಲನೆಯ ವರದಿಯನ್ನು ಈ ಮೂಲಕ ಸದನಕ್ಕೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷರು.-- ವರದಿಯನ್ನು ಮಂಡಿಸಲಾಗಿದೆ.

ಮನವಿಗಳು

1. Supersession of BSSK Ltd., Bidar

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರದಲ್ಲಿ ಎಲ್ಲಕ್ಕಿಂತಲೂ ಮುಖ್ಯಪಾತ್ರ ವಹಿಸುತ್ತಿರುವುದು ಸಹಕಾರ ಚಳುವಳಿ. ಮಾನ್ಯ ಮಂತ್ರಿಗಳಾದ ಜಾಲಪ್ಪನವರು ಸಹಕಾರಿಗಳು. ಆದರೆ ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಈ ಮನೆಗೆ ತಿಳಿಸುತ್ತೇನೆ. ಬೀದರ್‌ನ ಕೋ-ಆಪರೇಟಿವ್ ಷುಗರ್ ಫ್ಯಾಕ್ಟರಿ ಕರ್ನಾಟಕ ರಾಜ್ಯದಲ್ಲಿಯೇ ಒಂದು ಒಳ್ಳೆಯ ಫ್ಯಾಕ್ಟರಿ. ಸರ್ಕಾರದ ಕಡೆಯಿಂದಲೂ ಈ ಬಗ್ಗೆ ಪ್ರಶಂಸೆ ಸಿಕ್ಕಿದೆ. ಒಂದೇ ವರ್ಷದಲ್ಲಿ ವಿಸ್ತರಣೆ ಕಾರ್ಯ ಪೂರ್ತಿಯಾಗಿ ಮೊದಲ